## ಪದಲಹರಿ

(ಯಂತ್ರರ್ಷಿ : ಕೋಗಿಲೆ ಮತ್ತು ಸೋವಿಯತ್ ರಷ್ಯಾ)

### ಅಗ್ನಿಹಂಸ

ಕೃತ್ತಿಕಾ ನಕ್ಷತ್ರಕ್ಕೆ ಅಗ್ನಿತಾರೆ (ಅಗ್ನಿ + ತಾರೆ) ಎಂದು ಕರೆಯುತ್ತಾರೆ. ಅದೇ ರೀತಿ ಅಗ್ನಿಹಂಸ (ಅಗ್ನಿ + ಹಂಸ) ಪದವನ್ನು ಕುವೆಂಪು ಸೃಷ್ಟಿಸಿದ್ದಾರೆ. 'ಅಗ್ನಿಹಂಸ' ಜ್ಞಾನದ ಸಂಕೇತ. ಅಗ್ನಿಯು ಬೆಂಕಿ. ಅಗ್ನಿ ಬೆಂಕಿಯ ಅಧಿದೇವತೆ; ಅಷ್ಟ ದಿಕ್ಪಾಲಕರಲ್ಲಿ ಒಬ್ಬ; ಆಗ್ನೇಯ ದಿಕ್ಕಿನ ಅಧಿಪತಿ. ಅಗ್ನಿಯು ಪೃಥ್ವಿ ಮತ್ತು ಅಂತರಿಕ್ಷಗಳಲ್ಲಿರುವ ಸಮನ್ವಯದ ಸಂಕೇತ. ಹಂಸ ಒಂದು ಬಗೆಯ ಬಿಳಿಯ ಬಣ್ಣದ ಪಕ್ಷಿ. ಅದನ್ನು 'ಅಂಚೆ', 'ಮರಾಲ' ಎಂದು ಕರೆಯುವರು. ನೀರ–ಕ್ಷೀರ ವಿವೇಕವನ್ನು ಹೊಂದಿರುವ ಪಕ್ಷಿ ಎಂದು ಹೇಳುವರು. ಭಾರತೀಯ ಅಧ್ಯಾತ್ಮ ಚಿಂತನೆಯಲ್ಲಿ ಶ್ರೇಷ್ಠವಾದ ಆತ್ಮವನ್ನು 'ಹಂಸ' ಎನ್ನುವರು.

ವಿವೇಕಾನಂದರು ಆತ್ಮದ ಸಂಕೇತವಾಗಿ ಹಂಸ ಪಕ್ಷಿಯನ್ನು ಶ್ರೀ ರಾಮಕೃಷ್ಣಾಶ್ರಮದ ಚಿಹ್ನೆಯಲ್ಲಿ ಬಳಸಿದ್ದಾರೆ. ಆ ಹಂಸ ಪಕ್ಷಿಯ ಗುರಿ ಪರಮಾತ್ಮನನ್ನು ಕಾಣುವುದಾಗಿದೆ. ಆ ಗುರಿ ತಲುಪಲು ಆತ್ಮವು 'ಅಗ್ನಿಹಂಸ'ವಾಗಿ ಶುದ್ಧಗೊಂಡು ಜ್ವಾಲೆಯಂತೆ ಏರುಗತಿಯಲ್ಲಿ ಸಾಗಬೇಕು. ಹಾಗೆ ಆತ್ಮ ಮತ್ತು ಪರಮಾತ್ಮನ ಅಗ್ನಿ ನಿಕಷಕ್ಕೆ ಒಳಗಾದುದು ಅಧ್ಯಾತ್ಮ ಚಿಂತಕ ಯೋಗಿಯ ಚೈತನ್ಯ. ಆ ಪಥದಲ್ಲಿ ಸಾಗಲು 'ಹೇ ಋತ ಚಿನ್ಮಯೀ ಸತ್ಯ ಜ್ಞಾನ ಸ್ವರೂಪಳಾದ ಜಗನ್ಮಾತೆಯೇ, - ನನ್ನ ಹೃದಯ ಪದ್ಮ ಅರಳಿ, ಮನೋದ್ವಾರ ಬಿರಿದು, 'ಅಗ್ನಿಹಂಸ' ಗರಿಗೆದರಿ ಕರೆಯುತ್ತಿದೆ – ಇಳಿದು ಬಾ, ನನ್ನನ್ನು ಪಾವನಗೊಳಿಸು' ಎಂದು ಕುವೆಂಪು ಪ್ರಾರ್ಥಿಸಿದ್ದಾರೆ.

'ಅಗ್ನಿಹಂಸ ಗರಿಗೆದರೆ ಕರೆವೆ, ಬಾ ತಾಯಿ ಬಾ, ಇಳಿದು ಬಾ!
ಚೈತ್ಯ ಪುರುಷ ಯಜ್ಞಕ್ಕೆ ನೀನೆ ಅಧ್ವರ್ಯು, ಬಾ, ಇಳಿದು ಬಾ!'
(ಋತ ಚಿನ್ಮಯೀ ಜಗನ್ಮಾತೆಗೆ : ಅಗ್ನಿಹಂಸ)

### ಪಕ್ಷಿಕಾಶಿ

ಕುವೆಂಪು ಅವರು ಒಂದು ದ್ವೀಪದ ಕಾಡಿನ ಕೃಪೆಯಲ್ಲಿರುವ ಪಕ್ಷಿಗಳ ವಾಸಸ್ಥಾನವನ್ನು 'ಪಕ್ಷಿಕಾಶಿ' ಎಂದು ಕರೆದು ಹೊಸ ಪದ ಸೃಷ್ಟಿಸಿ ಅಭಿವ್ಯಕ್ತಿಸಿದ್ದಾರೆ. ಅದು ಗಂಗಾನದಿ ತೀರದಲ್ಲಿರುವ ಪ್ರಸಿದ್ಧ ಕಾಶಿ ಕ್ಷೇತ್ರದಂತೆ ಪವಿತ್ರವಾದದ್ದು ಎಂಬ ಭಾವ ಅಲ್ಲಿ ಸ್ಫುರಿಸುತ್ತದೆ. ಅದು ನಾಮವಾಚಕದ ಅರ್ಥ. ಗುಣವಾಚಕವಾಗಿ 'ಕಾಶಿ' ಬಳಸುವಾಗ ಹೊಮ್ಮುವ ಅರ್ಥ: ಹೊಳೆಯುವ; ಪ್ರಕಾಶಿಸುವ.

ಪಕ್ಷಿಗಳ ಸಹಜ ಲಕ್ಷಣ ಪವಿತ್ರವಾಗಿ ಕಂಗೊಳಿಸುವುದು. ಈ ಅರ್ಥಗಳಿಂದ 'ಪಕ್ಷಿಕಾಶಿ' ಪದ ಇಲ್ಲಿ ಪ್ರಯೋಗವಾಗಿದೆ. ಹಾಗಾಗಿ ಬೇಡರವನಿಗೆ 'ನಿನಗೆ ಇಲ್ಲಿ ಪ್ರವೇಶವಿಲ್ಲ' ಎಂದು ಕವಿ ತಿಳಿ ಹೇಳಿದ್ದಾರೆ:

'ಇಲ್ಲಿ ಹುಗಲಿಲ್ಲ ನಿನಗೆ, ಓ ಬಿಯದ:
ಇದು ಪಕ್ಷಿಕಾಶಿ!'
(ಪಕ್ಷಿಕಾಶಿ)

### ಹಿನಿಹಲ್ಲೆ

ಕುವೆಂಪು ಅವರು ಹೆಣ್ಣಿನ ತುಟಿಯನ್ನು ಹೀಗೆ ಬಣ್ಣಿಸಿದ್ದಾರೆ:
'ಕೆಂದೊಂಡೆಯ ಹಣ್ಣಿನಂತಿರುವ ನಿನ್ನ ಚೆಂದುಟಿ ಕಿರುಜೇನಿನ
ಹಿನಿಹಲ್ಲೆಯಂತೆ ಮೃದು, ಮಧುರ, ಸುಂದರ'
(ಸಮರ್ಪಣ: ಕಿಂಕಿಣಿ)

ಜೇನುಗೂಡನ್ನು ಕಂಡ ಕವಿ, ಜೇನನ್ನು ಓಡಿಸಿ, ಕಿರುಜೇನಿನ 'ಹಿನಿಹಲ್ಲೆ'ಯನ್ನು ಸೂಕ್ಷ್ಮವಾಗಿ ಗಮನಿಸಿ ಅದರ ಸವಿ ಸವಿದವರು. ಆ ಜೇನುಹುಟ್ಟು 'ಹಿನಿ'ಯಾಗಿರುತ್ತದೆ. ಸಣ್ಣ ರಂಧ್ರಗಳಿಂದ ತುಂಬಿದ porus ಗುಣವನ್ನು